MVC.No.218/2017 C/W 404/2017 RW-4

<u>ದಿನಾಂಕ **31.07.2025** ರಂದು ಸಾಕ್ಷಿಯನ್ನು ಕರೆಯಿಸಿ**,** ಪ್ರಮಾಣ ವಚನ ಬೋಧಿಸಲಾಯಿತು**.**</u>

<u>ಮುಖ್ಯವಿಚಾರಣೆಃ ಎದುರುದಾರರ ಪರ ಶ್ರೀ ಎಸ್ ವೈ ಎಸ್ ವಕೀಲರಿಂದಃ</u>

ಸಾಕ್ಷಿ ಪ್ರಮಾಣ ಪತ್ರದಲ್ಲಿ ತಿಳಿಸಿರುವ ಎಲ್ಲಾ ವಿಷಯಗಳು ಸತ್ಯವಾಗಿರುತ್ತದೆ. ಅದನ್ನು ನನ್ನ ಸಾಕ್ಷ್ಯವೆಂದು ಪರಿಗಣಿಸಲು ಕೋರಿಕೊಳ್ಳುತ್ತೇನೆ. ಅರ್ಜಿಗೆ ಸಂಬಂದಪಟ್ಟಂತೆ ವರದಿಯನ್ನು ನೋಡುತ್ತಿದ್ದು ಅದನ್ನು ಈಗಾಗಲೇ ನಿಆರ್-7 ಎಂದು, ಅದರಲ್ಲಿರುವ ನನ್ನ ಸಹಿಯನ್ನು ನಿಆರ್-7(ಎ) ಎಂದು, ನಾನು ಕೊಟ್ಟಂತಹ ಸಿಡಿಗಳನ್ನು ಮತ್ತು ಪೆನ್ ಡ್ರೈವ್ ಅನ್ನು ನೋಡುತ್ತಿದ್ದು ಅದನ್ನು ಈಗಾಗಲೇ ನಿಆರ್-8 ರಿಂದ ನಿಆರ್-10 ಎಂದು ಗುರುತಿಸಲಾಯಿತು.

<u>ಪಾಟೀಸವಾಲುಃ ಅರ್ಜಿದಾರರ ಪರ ಶ್ರೀ ಎಂ ಕೆ ಎನ್ ವಕೀಲರಿಂದಃ</u>

ನಾನು Clue 4 ನ ನಿರ್ದೇಶಕರು ಮತ್ತು ಮುಖ್ಯ ವಿಧಿ ವಿಜ್ಞಾನ ತಜ್ಞರು ಆಗಿರುತ್ತೇನೆ. ನಿಆರ್-7 ಅನ್ನು ಇಬ್ಬರು ಅಧಿಕಾರಿಯವರು ವೈಜ್ಞಾನಿಕ ಪರೀಕ್ಷೆ ಪರೀಕ್ಷೆಮಾಡಿರುತ್ತಾರೆ. ಮೊದಲನೇ ವೈಜ್ಞಾನಿಕ ಅಧಿಕಾರಿಯಾಗಿ ಸಾರುಮತಿಯವರು ಪರೀಕ್ಷೆ ಮಾಡಿರುತ್ತಾರೆ. ಎರಡನೇ ವೈಜ್ಞಾನಿಕ ಅಧಿಕಾರಿಯಾಗಿ ನಾನು ಪರೀಕ್ಷೇ ಮಾಡಿರುತ್ತೇನೆ. ಸಾರುಮತಿಯವರು ಮಾಡಿರುವ ವರದಿಗೆ ನಾನು ಸಹಿ ಮಾಡಿದ್ದೇನೆಂದರೆ ಸಾಕ್ಷಿಯು ಇಬ್ಬರೂ ಮಾಡಿರುವ ವರದಿಗೆ ಇಬ್ಬರೂ ಸಹಿ ಮಾಡಿರುತ್ತೇವೆಂದು ನುಡಿಯುತ್ತಾರೆ. ವರದಿಯ ಪ್ರತಿ ಪುಟದಲ್ಲಿ ಸಾರುಮತಿಯವರ ಸಹಿ ಮಾತ್ರ ಇದೆ ಎಂದರೆ ಸರಿ. ವರದಿಯ ಕೊನೆ ಪುಟದಲ್ಲಿ ಮಾತ್ರ ನನ್ನ ಸಹಿ ಇದೆ ಎಂದರೆ ನಿಜ. ವೈಜ್ಞಾನಿಕ ಪರೀಕ್ಷೆಗಾಗಿ ಕಳುಹಿಸಿದ ಸಿಡಿಯ ಇನ್ನೊಂದು ಪ್ರತಿಯನ್ನು ನಾವು ಮಾಡಿಕೊಳ್ಳುತ್ತೇವೆಂದರೆ ಸಾಕ್ಷಿಯು ಒಂದು ಹಂತದ ಪರೀಕ್ಷೆಗೆ ಆ ರೀತಿ ಮಾಡಿಕೊಳ್ಳುತ್ತೇವೆಂದು ನುಡಿಯುತ್ತಾರೆ. ಅಂದರೆ frame by frame ಪರೀಕ್ಷೆಗಾಗಿ ಆ ರೀತಿ ಮಾಡುತ್ತೇವೆಂದು ನುಡಿಯುತ್ತಾರೆ. ಈ ರೀತಿ ಈ ಪ್ರಕರಣದಲ್ಲಿ ನಾನು ಮಾಡಿರುತ್ತೇನೆ. ಈ ಪ್ರತಿಯನ್ನು ನ್ಯಾಯಾಲಯಕ್ಕೆ ಕೊಟ್ಟಿಲ್ಲ. ಸಿಡಿಯಲ್ಲಿರುವ ವೀಡೀಯೋ ಯಾವತ್ತು ಆಗಿದೆ ಎಂದು ನಮಗೆ ಗೊತ್ತಾಗುತ್ತದೆ ಎಂದರೆ ನಿಜ. ಸದರಿ ವೀಡೀಯೋವನ್ನು ಯಾವತ್ತು ಸಿಡಿಗೆ ಹಾಕಿರುತ್ತೇವೆಂದು ಗೊತ್ತಾಗುತ್ತದೆ ಎಂದರೆ ನಿಜ. ವೀಡೀಯೋವನ್ನು ಮಾಡಿರುವ ಸಮಯ ಮತ್ತು ಅದರ ಪ್ರತಿಯನ್ನು ಮಾಡಿರುವ ಸಮಯ ಒಂದೇ ಇದೆ ಎಂದರೆ ಸಾಕ್ಷಿಯು ನಾವು ಸಿಡಿಯಲ್ಲಿರುವ ವೀಡೀಯೋ ಪೈಲ್ ಅನ್ನು ಮಾತ್ರ

ನಾವು ಪರೀಕ್ಷೆ ಮಾಡಿರುತ್ತೇವೆಂದು ನುಡಿಯುತ್ತಾರೆ. ವೀಡೀಯೋದಲ್ಲಿ ದಿನಾಂಕ ಮತ್ತು ವೇಳೆ frame ನಲ್ಲಿ ಕಾಣುತ್ತದೆಯೇ ಎಂದರೆ ಸಾಕ್ಷಿಯು ಅದನ್ನು ನಾವು ನೋಡುವುದಿಲ್ಲ ಎಂದು ನುಡಿಯುತ್ತಾರೆ. ವೀಡೀಯೋ ರೆಕಾರ್ಡ್ ಆದ 5 ವರ್ಷಗಳ ನಂತರ ನಾನು ವೈಜ್ಞಾನಿಕ ಪರೀಕ್ಷೆ ಮಾಡಿರುತ್ತೇನೆಂದರೆ ಸಾಕ್ಷಿಯು ವೀಡೀಯೋ ರೆಕಾರ್ಡ್ ಆದ ದಿನಾಂಕಕ್ಕೂ ನನ್ನ ವೈಜ್ಞಾನಿಕ ಪರೀಕ್ಷೆಗೂ 5 ವರ್ಷಗಳ ಅಂತರವಿದೆ ಎಂದು ನುಡಿಯುತ್ತಾರೆ. ಈ 5 ವರ್ಷಗಳಲ್ಲಿ ಈ ವೀಡೀಯೋ ಎಲ್ಲಿ ಇತ್ತು ಎಂದು ನನಗೆ ಗೊತ್ತಿಲ್ಲ. ನಾನು ವರದಿಯಲ್ಲಿ ಆಡಿಯೋ ಬಗ್ಗೆ ತಿಳಿಸಿಲ್ಲ ಎಂದರೆ ಸಾಕ್ಷಿಯು 5 ನೇ ಪುಟದಲ್ಲಿದೆ ಎಂದು ನುಡಿಯುತ್ತಾರೆ. ಆಡಿಯೋ ಮೂಲತಃ ಯಾವ ಪಾರ್ ಮೆಟ್ ನಲ್ಲಿತ್ತು ಎಂದರೆ ಸಾಕ್ಷಿಯು MP4 ನಲ್ಲಿ ಇತ್ತು ಎಂದು ನುಡಿಯುತ್ತಾರೆ. ವೀಡಿಯೋ ಮೂಲತಃ ಯಾವ ಉಪಕರಣದಲ್ಲಿ ಚಿತ್ರೀಕರಿಸಿದ್ದರು ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ವೀಡಿಯೋ ದೃಡೀಕೃತವೇ ಎಂದು ಕೇಳಿರುತ್ತಾರೆ. ಆದರೆ ಆಡಿಯೋ ಯಾರಿಗೆ ಸಂಬಂದಪಟ್ಟಿದ್ದು ಎಂದು ಕೇಳಿಲ್ಲ. ಮೂಲ ವ್ಯಕ್ತಿಯ ಆಡಿಯೋ ಅಥವಾ ವೀಡೀಯೋ ನನಗೆ ಕೊಟ್ಟಿಲ್ಲ ಎಂದರೆ ನಿಜ. ಆಡಿಯೇ ವರದಿ ಇಲ್ಲ ಎಂದರೆ ಸಾಕ್ಷಿಯು Video includes audio ಎಂದು ನುಡಿಯುತ್ತಾರೆ . ಈ ಬಗ್ಗೆ ವರದಿಯಲ್ಲಿ ನಮೂದು ಇಲ್ಲ ಎಂದರೆ ನಿಜ.ಸಾಕ್ಷಿ ಮುಂದುವರೆದು ಸದರಿ ಪ್ರಕರಣದಲ್ಲಿ ವೀಡಿಯೋ ಮಾತ್ರ ಪರೀಕ್ಷೆಗೆ ಒಳಪಡಿಸಿರುತ್ತೇವೆ ಪ್ರತ್ಯೇಕವಾಗಿ ಆಡಿಯೋವನ್ನು ಸ್ಯಾಂಪಲ್ ಆಗಿ ಪರಿಗಣಿಸದೇ ಇರುವುದರಿಂದ ಮಾಡಿರುವುದಿಲ್ಲ. ವೀಡಿಯೋ ಮತ್ತು ಆಡಿಯೋ ಒಬ್ಬನೇ ವ್ಯಕ್ತಿಗೇ ಸೇರಿದ್ದು ಎಂದು ವರದಿಯಲ್ಲಿ ಸೇರಿಸಿಲ್ಲ ಎಂದರೆ ನಿಜ. ಸಾಕ್ಷಿ ಮುಂದುವರೆದು ವೀಡಿಯೋ ಮತ್ತು ಅದರಲ್ಲಿರುವ ಆಡಿಯೋ ಒಂದೇ ಸಮಯದಲ್ಲಿ ಚಿತ್ರೀಕರಣಗೊಂಡಿದೆ ಎಂದು ವರದಿಯನ್ನು ನೀಡಿರುತ್ತೇವೆಂದು ನುಡಿಯುತ್ತಾರೆ. ವೀಡಿಯೋ ಮತ್ತು ಆಡಿಯೋ ಪ್ರಕಣರಣಕ್ಕೆ ಸಂಬಂದಪಟ್ಟಿದ್ದು ಅಲ್ಲ ಎಂದರೆ ಸುಳ್ಳು. ವೀಡಿಯೋ ಮತ್ತು ಆಡಿಯೋ ಬೇರೆ ಬೇರೆ ವ್ಯಕ್ತಿಗೆ ಸಂಬಂದಪಟ್ಟಿದ್ದು ಎಂದರೆ ಸಾಕ್ಷಿಯು ಈ ಬಗ್ಗೆ ಪರೀಕ್ಷೆ ಮಾಡಿಲ್ಲ ಎಂದು ನುಡಿಯುತ್ತಾರೆ . ನಿಆರ್-8 ಅನ್ನು edit and tamper ಮಾಡಿದ್ದಾರೆಂದರೆ ಸುಳ್ಳು. ಎದುರುದಾರರರಿಗೆ ಅನುಕೂಲವಾಗಲೀ ಎಂದು ವರದಿಯನ್ನು ತಯಾರು ಮಾಡಿರುತ್ತೇನೆಂದರೆ ಸುಳ್ಳು. ನಾನು ವೈಜ್ಞಾನಿಕ ಪರೀಕ್ಷೆಯನ್ನು ಸರಿಯಾಗಿ ಮಾಡಿಲ್ಲಎಂದರೆ ಸುಳ್ಳು.

<u>ಮರುವಿಚಾರಣೆಃ ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಗಣಕೀಕರಣ ಮಾಡಲಾಯಿತು)**Na**

ಓ ಹೇ ಕೇ ಸ ಒ

**(ವೆಂಕಟೇಶಪ್ಪ. ವಿ)**
ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ.,ಚನ್ನಪಟ್ಟಣ.